loopholes in the interest of national economy. I am very happy that the Chief Minister has expressed his anquish and concern about the loss of revenue to the nation, to the State exchequer in this stamp paper transaction.

Chief Minister has expressed his anquish and concern ಅದಕ್ಕೋಸ್ಕರ ನೀವು ನಮ್ಮ ಸರ್ಕಾರದಲ್ಲಿ ಏನು reformsನ್ನು ತಂದಿದ್ದೇವೆ, loopholes ಅದನ್ನು plug ಮಾಡಬೇಕೆಂದು ಹೇಳಿದ್ದಾರೆ. ಇನ್ನೊಂದು ಏನು ಹೇಳಿದ್ದೀರಿ. while the Government of India remained inactive, my collegue Sri. Mallikarjuna Kharge in his letter dated 16.4.2003 requested the Union Finance Minister to bestow his personal attention to plug the loopholes in the manufacturing process of Stamps and Stamp papers undertaken in the Indian Security Press, Nasik. While the Government of India remained inactive in the matter, the State Government under the leadership of Sri S.M. Krishna took the lead in announcing major reforms in stamps and Judicial papers. With effect from April 2003, the use of stamp papers and stamps including Judicial stamps have been dis-continued. By this all fake stamp papers and stamps will be eliminated. Yes, I agree it can be eliminated. Now I would like to know what are the new reforms undertaken between 18.8.1999 amendment and April 2003. ಈಗ ನೀವು ಅದರಿಂದ ತಾತ್ವಿಕವಾಗಿ ಯಾವ ಒಂದು ಸುಧಾರಣೆಯನ್ನು ತಂದು ಎಷ್ಟರಮಟ್ಟಿಗೆ ತಡೆಗಟ್ಟಿದ್ದೀರಿ, ಒಂದು. ನನಗೆ ಗೊತ್ತಾದ ಪ್ರಕಾರ ನಾನು ಹೇಳುವುದಾದರೆ ನಮ್ಮ ಜೆ.ಹೆಚ್. ಪಟೇಲರ ಸರ್ಕಾರ 18-8-99 ರಲ್ಲಿ ಒಂದು ತಾತ್ವಿಕವಾದ ಸಿಸ್ಟಂನ್ನು ತಯಾರು ಮಾಡಿದೆವು. ತಾತ್ವಿಕವಾದ ಒಂದು ಬದಲಾವಣೆಯನ್ನು ತಯಾರು ಮಾಡಿದೆವು. ಪಾಪ, ಅದಕ್ಕೆ ನಮ್ಮ ಜೆಹೆಚ್ ಪಟೇಲರಿಗೆ ಕೂದಲು ಇರಲಿಲ್ಲ. ಬಾಲ್ಡೆಹೆಡ್. ಹಲ್ಲು ಇತ್ತು. ನೀವು 2003 ರಲ್ಲಿ ಅದಕ್ಕೊಂದು ಟೋಫನ್‌ನ್ನು ಹಾಕಿ ಹಲ್ಲು ಇಲ್ಲದಿದ್ದವರಿಗೆ ಹಲ್ಲನ್ನು ಕಟ್ಟಿಸಿ ಇದೊಂದು ಹೊಸ ಸಿಸ್ಟಂ ಎಂದು ತಂದಿದ್ದೀರಿ ಎಂದು ನನ್ನ ಅನಿಸಿಕೆ. This is my understanding.

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ಒಪ್ಪಿಕೊಳ್ಳುತ್ತೇವಲ್ಲಾ.

ಶ್ರೀ ಬಿ. ಸೋಮಶೇಖರ್:- ಈಗ ತಾವು ಹೇಳಬೇಕಾಗಿರುವುದು ಎಷ್ಟು ಲಾಸ್ ಆಗಿದೆ ಎಂದು.

SRI D.B. CHANDRE GOWDA:- The sum and substance of the whole argument is "I did it". ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ಬಿ. ಸೋಮಶೇಖರ್:- ನಾವು ಮಾಡಿದ್ದು ಏನೆಂದರೆ...

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಮಾಡಿದ್ದು ಹೇಗಿದೆ ಎಂದರೆ "ಅಕ್ಕ ಹೋಗಬೇಡ, ಭಾವ ಬಿಡಬೇಡ" ಎನ್ನುವ ಹಾಗಿತ್ತು ನೀವು ಬೇಕಾದರೆ ಸ್ಟಾಂಪ್ ಪೇಪರ್ ಮೇಲೆ ರಿಜಿಸ್ಟರ್

ಮಾಡಿಸಿಕೊಳ್ಳಬಹುದು. ಇಲ್ಲವೆಂದರೆ ಕ್ಯಾಷೋ, ಡ್ರಾಫ್ಟ್ ಕೊಟ್ಟು ಮಾಡಿಸಿಕೊಳ್ಳಬಹುದು. ಅಂದರೆ ಅದೂ ಇರಲಿ, ಇದೂ ಇರಲಿ ಎಂದಹಾಗೆ ಆಯಿತು. ಅದಕ್ಕೆ ನಾವೇನು ಮಾಡಿದ್ದೇವೆಂದರೆ ಆಗ ನೀವು ಇದನ್ನು ಮಾಡಿದರೂ ಕೂಡ ಸ್ಟಾಂಪ್ ಪೇಪರ್‌ನ್ನು ಇಂಡೆಂಟ್ ಮಾಡಿಕೊಳ್ಳುತ್ತಾ ಇದ್ದಿರಿ. ಅದನ್ನು ನಿಲ್ಲಿಸುವುದಕ್ಕೆ ಹೋಗಿರಲಿಲ್ಲ. ನಾವು ಮಾಡಿದ್ದೇನೆಂದರೆ ಸಂಪೂರ್ಣವಾಗಿ ಸ್ಟಾಂಪ್ ಪೇಪರನ್ನು ಇಂಡೆಂಟ್ ಮಾಡಿಕೊಳ್ಳುವುದನ್ನು ನಿಲ್ಲಿಸಿ....

ಶ್ರೀ ಬಿ. ಸೋಮಶೇಖರ್:– ಈ ಅಮೆಂಡ್‌ಮೆಂಟ್‌ಗೆ ಸಂಬಂಧಪಟ್ಟ ಗೆಜೆಟ್‌ನ್ನು ಕೊಡಿ. ಅಥವಾ ಒಂದು ಗೌರ್ನಮೆಂಟ್ ಆರ್ಡರನ್ನು ಕೊಡಿ. Then I will be convinced. That in what way it is different from the whole system? ಅದನ್ನು ಕೊಟ್ಟುಬಿಟ್ಟರೆ ನಮಗೆ ಸಾಕು. ಒಂದು. ಆಮೇಲಿನಿಂದ financial loss ಅದನ್ನೇ ಹೇಳುತ್ತಿದ್ದೆ. ಇದಕ್ಕೆ ಅವರು ನಾಳೆ ಉತ್ತರವನ್ನು ಕೊಡಬೇಕು. ಈ fake stamp papers ಇಲ್ಲಿ ಎಷ್ಟು ಚಲಾವಣೆಯಾಗಿದೆ, ಅಂದರೆ ರಿಜಿಸ್ಟ್ರೇಷನ್ ಸ್ಟಾಂಪ್ ಪೇಪರ್ಸ್ ಮೇಲೆ ಎಷ್ಟಾಗಿದೆ ಎಂದು ಗೊತ್ತಾಗಿಬಿಟ್ಟರೆ ನಮಗೆ ಅದು ಗೊತ್ತಾಗುತ್ತದೆ. ಮತ್ತೆ ಈ ಸಾಂಗ್ಲಿಯಾನ ರಿಪೋರ್ಟ್‌ನಲ್ಲಿ ಯಾವ ಯಾವ ಅಧಿಕಾರಿಗಳನ್ನು ನೇಮ್ ಮಾಡಿದರು, ಅವರ ಮೇಲೆ ತಾವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಮತ್ತೆ ಮೊದಲಿನಿಂದಲೂ ಹೇಳುತ್ತಿದ್ದರು, ರೋಷನ್ ಬೇಗ್‌ರವರು ರಾಜೀನಾಮೆ ಕೊಡಬೇಕು ಕೊಡಬೇಕು ಎಂದು ಕೇಳುತ್ತಿದ್ದರೂ ಅವರ ಬಗ್ಗೆ... the needle of suspicion is pointing at him ಎಂದು ಹೇಳುತ್ತಿದ್ದೆವು. ಅವರೇನೋ ನಾನೇನೂ ಅದರಲ್ಲಿ involve ಆಗಿಲ್ಲವೆಂದು ಹೇಳುತ್ತಿದ್ದರು. ನಿಮ್ಮ ಸರ್ಕಾರದವರು ನೀವು ಸೇರಿಲ್ಲ, ನೀವು ರಾಜೀನಾಮೆಯನ್ನು ಕೊಡುವ ಅವಶ್ಯಕತೆ ಇಲ್ಲ ಎಂದಿರಿ. ಮೂರು ವರ್ಷಗಳ ಕಾಲ ಸತತವಾಗಿ ಡಿಫೆಂಡ್ ಮಾಡುತ್ತಾ ಬಂದಿರಿ. ಕೊನೆಗೆ ಸಿಬಿಐ ಅವಶ್ಯಕತೆ ಇಲ್ಲವೆಂದು ಹೇಳುತ್ತಾ ಬಂದಿರಿ. ಅದಾದ ಮೇಲೆ ನೀವು ಸಿಬಿಐ ಗೂ ಕೊಟ್ಟಿರಿ. ರೋಷನ್ ಬೇಗ್ ರಾಜೀನಾಮೆಯನ್ನೂ ತೆಗೆದುಕೊಂಡಿರಿ. ನೀವು ಹೇಳುತ್ತಿದ್ದುದ್ದಕ್ಕೂ ಇದಕ್ಕೂ ವ್ಯತ್ಯಾಸವೇನು ಇದೆ? ಏನಾದರೂ circumstances ಬದಲಾವಣೆಯಾಗಿದೆಯೇ? ಸನ್ನಿವೇಶಗಳೇನಾದರೂ ಬದಲಾವಣೆಯಾಗಿದೆಯೇ? ಅದಕ್ಕೆ ಕಾರಣವನ್ನು ಹೇಳಲೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ನನ್ನ ಬಗ್ಗೆ ಬಹಳ ವ್ಯಂಗ್ಯವಾಗಿ ಮಾತನಾಡಿದರು. Constitution ನಲ್ಲಿ ಸೋಮಶೇಖರ್‌ರವರು ಛೇಂಜ್ ಮಾಡಲಿ, ಅವರನ್ನು ಕೇಳಿ ಹೇಳಿ ಯಾರನ್ನು ತೆಗೆದುಕೊಳ್ಳಬೇಕು, ಯಾರನ್ನು ಬಿಡಬೇಕು ಎಂದು ಮಾಡುತ್ತೇನೆಂದರು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. It is the prerogative of the Chief Minister.. ನಾನು ಹೇಳಿದ್ದೇನೆಂದರೆ it is the propriety ಮಾನ್ಯ ಸಿಂಧ್ಯಾರವರು ಒಳ್ಳೆಯ ಉದಾಹರಣೆಯನ್ನು ಕೊಟ್ಟರು. ಒಂದು system ನ್ನು ಒಂದು tradition ನ್ನು ನಾವು follow ಮಾಡಿಕೊಂಡು ಬಂದಿದ್ದೇವೆ, ನಾನು ಮಂತ್ರಿಯಾಗಿದ್ದು ರಾಜಿನಾಮೆ ಕೊಟ್ಟಾಗ ಒಂದು explanation ನ್ನು ಕೊಟ್ಟಿದ್ದೇನೆ. ಆ ರೀತಿ ಬಂದು ಅವರೂ ಕೂಡ ತಮ್ಮ ಸ್ಟೇಟ್‌ಮೆಂಟನ್ನು ಕೊಡಬೇಕಾಗಿತ್ತು. ಮತ್ತು ಮಾನ್ಯ ಮುಖ್ಯಮಂತ್ರಿಗಳೇ ಈ ಕಾರಣದಿಂದ ರಾಜೀನಾಮೆಯನ್ನು accept ಮಾಡಿದೆ ಎಂದು ಹೇಳಬಹುದಾಗಿತ್ತು. ಈಗ ಅವರು ಕೊಟ್ಟಮೇಲೆ ಈಗ ಕಾರಣವನ್ನು ನೀವು ಹೇಳಬೇಕು. ರೋಷನ್ ಬೇಗ್‌ರವರು ಈ ಕಾರಣದಿಂದ ರಾಜೀನಾಮೆಯನ್ನು ಕೊಟ್ಟಿಲ್ಲ,

ಅಥವಾ ಈ ಕಾರಣದಿಂದ ರಾಜೀನಾಮೆಯನ್ನು ಕೊಟ್ಟಿದ್ದಾರೆ, ನಾನು ಒಪ್ಪಿಕೊಂಡಿದ್ದೇನೆ ಎಂದು ಹೇಳಬಹುದಾಗಿತ್ತು.

ಶ್ರೀ ಎಸ್.ಎಸ್. ಪಾಟೀಲ್:– ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೋ ಅಥವಾ ಇವರೇ ತೆಗೆದುಕೊಂಡಿದ್ದಾರೊ? ಇದು ಪ್ರಶ್ನೆ ಇದೆ. ಇವರೇ ರಾಜೀನಾಮೆಯನ್ನು ತರಿಸಿಕೊಂಡಿದ್ದಾರೆ.

ಶ್ರೀ ಬಿ. ಸೋಮಶೇಖರ್:– ಈ ರಾಜೀನಾಮೆಯನ್ನು ಸಾಮಾನ್ಯ ವ್ಯವಸ್ಥೆ, ಒಳಗಡೆ ತೆಗೆದುಕೊಂಡಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಈಗ ಸಪೋಸ್ ಕಾಗೋಡು ತಿಮ್ಮಪ್ಪನವರು ರಾಜೀನಾಮೆಯನ್ನು ಕೊಟ್ಟಿದ್ದರೆ ಅವರು ವೈಯಕ್ತಿಕವಾಗಿ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ತಿಳಿದುಕೊಳ್ಳಬಹುದಿತ್ತು. ಅಥವಾ ಯಾವುದೋ ಒಂದು ಕಾರಣದಿಂದ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಹೇಳಬಹುದಾಗಿತ್ತು. Why Roshan Baig alone tendered his resignation or sought his resignation from him because there was a serious allegation against him which was debated in the entire State and Assembly also. He refused to resign. The Chief Minster also inturn was protecting him. How suddenly he himself resigned or you sought his resignation. ಅದರ ಬಗ್ಗೆ ತಾವು clarification ನ್ನು ಹೇಳಬೇಕಾಗುತ್ತದೆ.

5.40 ಪಿಎಂ

ಇಲ್ಲದಿದ್ದರೆ ನಾವು ವಿರೋಧ ಪಕ್ಷದವರು ಏನು ಅಲಿಗೇಷನ್ ಮಾಡಿದ್ದೇವೆ, ಅದು ಸಾಬೀತಾಗಿದೆ ಆದುದರಿಂದ ರಾಜೀನಾಮೆ ಕೊಟ್ಟಿದ್ದಾರೆಂದು ನಾವು ಆರೋಪವನ್ನು ಮಾಡಿದ್ದೇವೆ; ಅದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಸರ್ಕಾರ ಅದನ್ನು ಗಮನಿಸಿ ರಾಜೀನಾಮೆ ಕೊಡಬೇಕೆಂದು ನಾವು ಹೇಳುತ್ತೇವೆ. 1.4.2003 ರಲ್ಲಿ ಹೊಸ ಪದ್ಧತಿ ಮಾಡಿದ್ದೇವೆಂದು ಹೇಳಿದಿರಿ, 18.8.1999 ರಿಂದ ಇದನ್ನು ಏಕೆ ಇಂಪ್ಲಿಮೆಂಟ್ ಮಾಡಲಿಲ್ಲ, ಇದರಲ್ಲಿ ಏನು ಲೋಪ ಇತ್ತು ಎಂದು ತಾವು ಹೇಳಿದರೆ ಅದು ಸರಿ ಹೋಗಬಹುದು ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸಭಾಧ್ಯಕ್ಷರೆ, ಸ್ಟಾಂಪ್ ಡ್ಯೂಟಿ, ಸ್ಟಾಂಪ್ ಆಕ್ಟ್ ಬಗ್ಗೆ ಅವರು ಸಾಕಷ್ಟು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂದ್ಯಾ:– ಎಂಟೈರ್ ವ್ಯವಸ್ಥೆ ಬಗ್ಗೆ ನಾನು ಸ್ವಲ್ಪ ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:– ನಾನು ಬೇಡವೆಂದು ಹೇಳುತ್ತಿಲ್ಲ ಕೇಳಿ. ಸ್ಟಾಂಪ್ಸ್ ಬಗ್ಗೆ ಹೇಳುತ್ತಿದ್ದಾರೆ, ಕಾನೂನು ಸಚಿವರು ನೀವು ಇದರ ಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದರು ಅದಕ್ಕಾಗಿ ಹೇಳುವುದಕ್ಕೆ ನಿಂತೆ. ಬೇಡವೆಂದು ಹೇಳಿದರೆ ಕೂತುಕೊಳ್ಳುತ್ತೇನೆ. Karnataka's Bill on the ban of using stamp paper is still pending before the Government of India for approval. ತಮಗೆ ನಾವು ಏನು ಹೇಳಿದ್ದೇವೆ, ಕರ್ನಾಟಕ ಸ್ಟಾಂಪ್ ಅಮೆಂಡ್‌ಮೆಂಟ್ ಬಿಲ್ 2003 ಮಾನ್ಯ ಮುಖ್ಯಮಂತ್ರಿಗಳು 2003–04ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾವನೆಯನ್ನು ಮಂಡಿಸಿದ ಮೇಲೆ ಸ್ಟಾಂಪ್ ಪೇಪರನ್ನು ಡಿಸ್ಪೆನ್ಸ್ ಮಾಡಬೇಕೆಂದು ಹೇಳಿ ಇದುವರೆಗೆ ಟ್ರೆಜರಿಯಲ್ಲಿ ಸ್ಟ್ಯಾಂಪ್ ಪೇಪರನ್ನು ಇಂಡೆಂಟ್ ಮಾಡಿ ತೆಗೆದುಕೊಂಡಿಲ್ಲ.

ಶ್ರೀ ಬಿ. ಸೋಮಶೇಖರ್:– ಈ ಬಿಲ್ ಪೆಂಡಿಂಗ್ ಇದೆ, ಅದರ ಪ್ರಕಾರ ತೆಗೆದುಕೊಂಡಿಲ್ಲವಾ ಇನ್ನು ಯಾವುದರ ಪ್ರಕಾರ ತೆಗೆದುಕೊಂಡಿಲ್ಲ ಹೇಳಿ. ಯಾವ ಪ್ರಾವಿಷನ್‌ನಲ್ಲಿ ನೀವು ತೆಗೆದುಕೊಂಡಿಲ್ಲ? Unless that is converted into an Act, unless the Government of India gives approval to that Bill, what is the law prevailing now? What is the system prevailing now and what is the provision?

ಶ್ರೀ ಡಿ.ಬಿ. ಚಂದ್ರೇಗೌಡ:– ನಾನು ಹೇಳುವುದಕ್ಕಾದರೂ ಬಿಡಿ, ಹೇಳಿದ್ದೇ ಹೇಳುತ್ತಿದ್ದೀರಿ. ಹಳೆಯ ಬಿಲ್ ಕರ್ನಾಟಕ ಮುದ್ರಾಂಕ ನಿಯಮಾವಳಿ 1958 ನಿಯಮ 10 ಎ ಪ್ರಕಾರ 18.8.1999 ರಿಂದ ಮುದ್ರಾಂಕ ಕಾಗದದ ಬಳಕೆಗೆ ಪರ್ಯಾಯ ದಸ್ತಾವೇಜನ್ನು ತಾವು ಮಾಡಿದಿರಿ. ನಾವು 1.4.2003ಕ್ಕೆ ಮಾಡಿರುವುದು, ಈ ಬಳಕೆಯನ್ನು ಕೈ ಬಿಟ್ಟಿದ್ದೇವೆ ಎಂದು.

SRI B. SOMASHEKAR:- Where is the Act? Where is the rule, notification?

ಶ್ರೀ ಡಿ.ಬಿ. ಚಂದ್ರೇಗೌಡ:– ನೀವು ಕ್ವೊಶ್ಚನ್ ಕಳುಹಿಸಿ ನಾನು ರಿಪ್ಲೆ ಮಾಡುತ್ತೇನೆ. ಈಗಿರತಕ್ಕಂತಹ ಸ್ಥಿತಿಯನ್ನು ನಿಮಗೆ ಹೇಳಿದೆ.

ಶ್ರೀ ಬಿ. ಸೋಮಶೇಖರ್:– ಕೇಳಿದಕ್ಕೆಲ್ಲಾ ಕೋಪ ಮಾಡಿಕೊಂಡರೆ ಹೇಗೆ? ನಾನು ಒಂದು ಪ್ರೊಡ್ಯೂಸ್ ಮಾಡಿದ್ದೇನೆ. ನೀವೂ ಒಂದು ಪ್ರೊಡ್ಯೂಸ್ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ:– ಹೇಳುವುದಕ್ಕೆ ಬಿಟ್ಟರೆ ಏನಾದರೂ ಹೇಳುವೆ.

ಅಧ್ಯಕ್ಷರು:– ನಾಳೆ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇಲ್ಲವೆಂದು ಹೇಳಿದ್ದರೆ ಅದು ಬೇರೆ ಪ್ರಶ್ನೆ. ನಾಳೆ ಕೊಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಕರ್ನಾಟಕ ಸ್ಟಾಂಪ್ ಅಮೆಂಡ್‌ಮೆಂಟ್ ಬಿಲ್ 2003 ಲೆಜಿಸ್ಲೇಟಿವ್ ಅಸೆಂಬ್ಲಿ ಬಿಲ್ ನಂಬರ್ 7, 2003 ಇದರಲ್ಲಿ ಸೆಕ್ಷನ್ 3 ರಲ್ಲಿ "In case of an instrument affixed or endorsed with effect of stamp, the manner of record of such a certificate....." has been incorporated under Section 10. For the purpose of relevant amendment and in order to give effect to the proposals made in the budget speech for the year 2003-04, now it is considered necessary to amend the Karnataka Stamp Act of 1957 to dispense with the use of stamp paper and start using new papers including stamps. ಎಂದು ಮಾಡಿದ್ದೇವೆ. ನೋಂದಣಿ ಕಾಗದ ಇಲಾಖೆ ಈ ಹಾಳೆ ಅಚ್ಚು ಹಾಕಿಸಿದ್ದೇವೆ. ಎರಡು ರೂಪಾಯಿ ಕೊಟ್ಟರೆ ಈ ಹಾಳೆ ಸಿಗುತ್ತದೆ. ಇದರಲ್ಲಿ ಅಚ್ಚು ಹಾಕಿಸತಕ್ಕಂಥದ್ದು ವ್ಯಾಲಿಡ್ ಎನ್ನತಕ್ಕಂತಹ ಮಾತನ್ನು ಹೇಳಿದ್ದೇವೆ. ಜೊತೆಗೆ ಬಿಲ್ಲನ್ನು ಅಮೆಂಡ್ ಮಾಡಿದ್ದೇವೆ. ಮುದ್ರಾಂಕ ಕಾಗದ ರದ್ದು ಗೊಳಿಸಬೇಕೆಂಬ ವಿಚಾರವನ್ನು ಭಾರತೀಯ ಮುದ್ರಾಂಕ ಕಾಯಿದೆ 899 ಇದರಡಿಯಲ್ಲಿ ಬರುತ್ತದೆ. ಅದಕ್ಕೆ ಅವರು ಕೆಲವು ಸ್ಟಾಂಪ್ಸ್ ಕ್ಲೀಯರ್ ಆಗಿ ಮಾಡಲಿಲ್ಲ. 15 ವೆರೈಟಿಯ ಸ್ಟಾಂಪ್‌ಗಳು ಇವೆ. ಅದರಲ್ಲಿ ಜ್ಯುಡಿಷಿಯಲ್, ನಾನ್ ಜ್ಯುಡಿಷಿಯಲ್, ಅಡಿಸಿವ್ ಸ್ಟಾಂಪ್ಸ್ ಮತ್ತು ಇನ್ನು ವಿಚಿತ್ರವಾದ ಹೆಸರುಗಳಿರುವಂತಹವು, ರೆವಿನ್ಯೂ ಸ್ಟಾಂಪ್ಸ್ ಹೀಗೆ ಅನೇಕ ವೆರೈಟಿಯ ಸ್ಟಾಂಪ್‌ಗಳಿವೆ. ಅದರ ಮೇಲೆ ಬೇಕಾದರೆ ಒಂದು ದಿವಸ ಡಿಸ್ಕಷನ್ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್:– ರೋಷನ್ ಬೇಗ್ ಅವರ ಮೇಲೆ ಕೇಸ್ ಹಾಕುವುದ ಒಗ್ಗೆ ಏನು ಮಾಡುತ್ತೀರಿ? ಅವರ ಮೇಲೆ ಕೇಸ್ ಹಾಕುತ್ತೀರೊ ಇಲ್ಲವೋ? ಅವರ ಬ್ಯಾಂಕ್ ಅಕೌಂಟ್ಸ್ ಸೀಜ್ ಮಾಡುತ್ತೀರೋ ಇಲ್ಲವೋ ಅವರ ಪ್ರಾಪರ್ಟಿ ಸೀಜ್ ಮಾಡುತ್ತೀರೋ ಇಲ್ಲವೋ ಇದನ್ನು ಹೇಳಿ. ಅದರ ಬಗ್ಗೆ ಏನೂ ಹೇಳುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಅವರು ಕೇಳಿದ ಪ್ರಶ್ನೆಗೇ ಉತ್ತರ ಹೇಳುತ್ತಿದ್ದೇನೆ.

(ಗೊಂದಲ)

4) ಮಂತ್ರಿಗಳ ಹೇಳಿಕೆ

ವಿಷಯ:– ನಕಲಿ ಛಾಪಾ ಕಾಗದ ಹಗರಣ ವಾಸ್ತವಾಂಶಗಳು

ಶ್ರೀ ಡಿ.ಬಿ. ಚಂದ್ರೇಗೌಡ::– ಕಂಡಿಕೆ ಸಂಖ್ಯೆ 29ಕ್ಕೆ ತಿದ್ದುಪಡಿ ಕೊಡುತ್ತಿದ್ದೇನೆ. ಮಾನ್ಯ ಸಿಂಧ್ಯರವರು ಎದ್ದು ನಿಂತಿದ್ದಾರೆ, ಮಾನ್ಯ ಸೋಮಶೇಖರ್‌ರವರ ಪ್ರಶ್ನೆಗೆ ನಾನು ಉತ್ತರ ಹೇಳುತ್ತಿದ್ದೇನೆ.

MR. SPEAKER:- I have allowed Mr.P.G.R. Sindhiya, ನಿಮ್ಮ ನಾಯಕರು ಮಾತನಾಡುವಾಗ ಅವರು ಹಾಗೆ ಗಲಾಟೆ ಮಾಡಿದರಾ?

ಶ್ರೀ ಡಿ.ಬಿ. ಚಂದ್ರೇಗೌಡ:– ತಿದ್ದುಪಡಿಯನ್ನು ಓದುತ್ತೇನೆ Correstion

(ಗೊಂದಲ)

"ಮೇಲ್ಕಂಡ ಹೊತ್ತಿಗೆಯಲ್ಲಿ ಪುಟ 14ರಲ್ಲಿ ಮುದ್ರಿತವಾಗಿರುವ ಕಂಡಿಕೆ ಸಂಖ್ಯೆ 29 ಅನ್ನು ಕೆಳಕಂಡಂತೆ ಓದಿಕೊಳ್ಳುವುದು:

(ಗೊಂದಲ)

29. ಜೈಲಿನಲ್ಲಿ ಬಂಧಿತರಾಗಿರುವ ಅಬ್ದುಲ್ ಕರೀಂ ಲಾಡ್‌ಸಾಬ್ ತೆಲಗಿ ಮತ್ತವನ ಸಹಚರರು ತಮ್ಮ ನಕಲಿ ಛಾಪಾ ಕಾಗದ ವ್ಯವಹಾರವನ್ನು ಮುಂದುವರೆಸುತ್ತಿದ್ದರು. ನಂಬಲರ್ಹ ಮಾಹಿತಿಗಳಂತೆ ಈತನ ತಂಡದವರು ಛಂಡೀಗರ್, ಚೆನ್ನೈ, ದೆಹಲಿ, ಹೈದರಾಬಾದ್, ಮುಂಬೈ, ಹಾಗೂ ರಾಷ್ಟ್ರದ ಇತರೆ ಪ್ರದೇಶಗಳಲ್ಲಿ ಹರಡಿ ಹೋಗಿದ್ದಾರೆ. ಈತ ಜೈಲಿನಲ್ಲಿದ್ದುಕೊಂಡೇ ಮೊಬೈಲ್ ಫೋನ್‌ಗಳ ಮೂಲಕ ತನ್ನ ಸಹಚರರ ನೆರವಿನೊಂದಿಗೆ ನಕಲಿ ಛಾಪಾ ಕಾಗದದ ಚಲಾವಣೆಯನ್ನು ಮುಂದುವರೆಸುತ್ತಿದ್ದ This is a correction to para 29 ತಿದ್ದುಪಡಿ ಅಂಗೀಕರಿಸಲ್ಪಟ್ಟಿತು.

MR. SPEAKER:- I cannot tolerate this kind of attitude.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಅಲ್ಲಿ ಸ್ವಲ್ಪ ಮಿಸ್ಟೇಕ್ ಆದುದನ್ನು ರೆಕ್ಟಿಫೈ ಮಾಡಲು ಕೊಟ್ಟಿತ್ತು. ಅದನ್ನು ದಯಮಾಡಿ ತಾವು ಪ್ರೆಸ್ ಮತ್ತು ಎಲ್ಲರಿಗೂ ಹೇಳಿದರೆ ಸರಿಹೋಗುತ್ತದೆ.

ಅಧ್ಯಕ್ಷರು:– ಆಯಿತು ತಾವು ತಂದ ತಿದ್ದುಪಡಿಯನ್ನು ಸೇರಿಸಲಾಗಿದೆ ಎಲ್ಲರಿಗೂ ಅದನ್ನು ಹಂಚಿಕೆ ಮಾಡಲಾಗಿದೆ. ಎಲ್ಲ ಸದಸ್ಯರಿಗೂ ಹಂಚಲಾಗುತ್ತದೆ.

5) ನಿಯಮ 69ರ ಮೇರೆಗೆ

ರಾಜ್ಯ ಹಾಗೂ ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾ ಕಾಗದ ಹಗರಣ ಬಗ್ಗೆ ಮುಂದುವರೆದ ಚರ್ಚೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನನಗೆ ಸರಕಾರದ ಉತ್ತರದಿಂದ ತುಂಬಾ ನಿರಾಶೆಯಾಗಿದೆ. ನಾನು ಸರಕಾರದವರಿಂದ ಏನು ನಿರೀಕ್ಷೆ ಮಾಡಿದ್ದೆ ಅಂದರೆ, ಇಲ್ಲಿ ಮೊದಲನೇದಾಗಿ ಇದರ ನೈತಿಕ ಜವಾಬ್ದಾರಿಯನ್ನು ಯಾರು ಹೊರಬೇಕೆಂಬ ಪ್ರಶ್ನೆ ಬರುತ್ತದೆ. ಈಗ ಶ್ವೇತಪತ್ರ ಅನ್ನುವ ರೀತಿಯಲ್ಲಿ ಕರ್ನಾಟಕ ಸರಕಾರದ ಗೃಹ ಇಲಾಖೆಯವರು ಅವಸರದಲ್ಲಿ ಇದನ್ನೇನು ಪ್ರಕಟಿಸಿದ್ದಾರೆ, ಇದು ತೇಪೆ ಹಾಕತಕ್ಕಂಥ ಕೆಲಸ. ಕಳೆದ ಎರಡು ಮೂರು ವರ್ಷಗಳಲ್ಲಿ ಈ ಹಗರಣ ಬೆಳಕಿಗೆ ಬಂದು, ಇದರ ಬಗ್ಗೆ ಸರಕಾರದ ದ್ವಂದ್ವನೀತಿಯಿಂದಾಗಿ, ಸರಕಾರವನ್ನು ನಡೆಸತಕ್ಕಂಥ ನಾಯಕರುಗಳ ದ್ವಂದ್ವ ಹೇಳಿಕೆಗಳಿಂದಾಗಿ, ವಿರೋಧಾಭಾಸಗಳಿಂದಾಗಿ, ಇವೊತ್ತು ಸರಕಾರ ಜನಗಳಿಂದ ವಿಶ್ವಾಸವನ್ನು ಕಳೆದುಕೊಂಡಿದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದು ಇರತಕ್ಕಂಥ ಅಂಶ. ನೀವು ಎರಡು ವರ್ಷಗಳ ಕಾಲ ಸತತವಾಗಿ, ಸಿಬಿಐಗೆ ಕೊಡುವುದಿಲ್ಲವೆಂದು ಹೇಳಿಕೊಂಡು ಬಂದಿದ್ದೀರಿ. ನಾವು ಸಹಿತ ಶ್ರೀಕುಮಾರ್‌ರವರು ನಿಮ್ಮ ಪರವಾಗಿ ಇದ್ದಾರೆಂದು ಎಲ್ಲಿಯೂ ಹೇಳಿಲ್ಲ. ಬಿಜೆಪಿಯವರಾಗಲಿ, ಎಬಿಜೆಡಿಯವರಾಗಲಿ, ಜೆಡಿಎಸ್ ನವರಾಗಲಿ. ಮುಂತಾಗಿ ನಾವು ಯಾರೂ ಕೂಡ ಈ ತನಿಖೆಯನ್ನು ನಡೆಸತಕ್ಕಂಥ ಜನಗಳ ಬಗ್ಗೆ ಮಾತನಾಡಿಲ್ಲ. ತಾವೇನೇ ಹಿಗ್ಗಾಮುಗ್ಗಾ ರಸ್ತೆಯಲ್ಲಿ ಸಿಬಿಐಯನ್ನು ಟೀಕೆ ಮಾಡಿದ್ದೀರಿ. ಈಗ ನಾವು, ಜಗದೀಶ್ ಶೆಟ್ಟರ್‌ರವರು, ಸೋಮಶೇಖರ್‌ರವರು ಕೇಳಿರತಕ್ಕಂಥಾದ್ದು ಇಷ್ಟೇನೇ. What are the changed circumstances for handing over to C.B.I.? ನೀವು ಜನವರಿ ಐದನೇ ತಾರೀಖು ಸುಪ್ರೀಂಕೋರ್ಟ್‌ನಲ್ಲಿ ಸರಕಾರಕ್ಕೆ ಛೀಮಾರಿ ಹಾಕುತ್ತಾರೆಂದು ಹೇಳಿ, ನೀವು ಎಂಟು ದಿನ ಮುಂಚಿತವಾಗಿ ಕ್ಯಾಬಿನೆಟ್‌ನಲ್ಲಿ ನಿಮಗೆ ಹೋಗಿರುವ ಮರ್ಯಾದೆಯನ್ನು ಉಳಿಸಿಕೊಳ್ಳುವಕ್ಕೆ ನೀವು ಪ್ರಯತ್ನ ಮಾಡಿದ್ದು ಒಂದು ಆದರೆ, ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯಾಗಿ ಮಂತ್ರಿಗಳು ಹೊರಗಡೆ ಬಂದಿರತಕ್ಕಂಥಾದ್ದು ಎಲ್ಲಿ ಸಹಿತವೂ ಇಲ್ಲ. ಒಬ್ಬ ಮುಖ್ಯಮಂತ್ರಿಗಳಾಗಿರತಕ್ಕಂಥವರು ದೇಶದ ತುಂಬಾ ನಾನು ಪ್ರಜಾತಂತ್ರದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇನೆ ಎಂದು ಭಾಷಣ ಮಾಡತಕ್ಕಂಥವರು ಈ ಮಂತ್ರಿಗೆ ಏಕೆ ರಾಜೀನಾಮೆ ಕೊಡಿಸಿದ್ದಾರೆ? ನೀವು ಹೊರಗಡೆ ಹೇಳಿಕೊಳ್ಳಿ. ಪಕ್ಷದ ಕೆಲಸಕ್ಕೋಸ್ಕರವಾಗಿ ನಾನು ಕೊಟ್ಟಿದ್ದೇನೆಂದು ಹೇಳಿಕೊಳ್ಳಿ. ಆದರೆ ಇಲ್ಲಿ ಹೇಳ ಬೇಕಲ್ಲವೇ? You are accountable, you are answerable to this House. ಅದು ಉತ್ತರ ಕೊಡುವುದಿಲ್ಲ ಎಂದು ಹೇಳುತ್ತೀರಾ? ಇನ್ನು ಜೈಲ್‌ನ ವ್ಯವಸ್ಥೆ ಬಗ್ಗೆ. ಈಗಾಗಲೇ ಮಾನ್ಯ ಖರ್ಗೆಯವರು ಅದನ್ನು ಓದಿರುತ್ತಾರೆ. ಅದು ಮುತ್ತಣ್ಣರವರ ವರದಿ. ಏಕೆಂದರೆ ಜವಾಬ್ದಾರಿಯಲ್ಲಿರತಕ್ಕಂಥ ಜನರು ಅದನ್ನು ಗಮನಿಸ ಬೇಕಾಗುತ್ತದೆ. ಇಷ್ಟೆಲ್ಲ ಆಗಿದ್ದರೂ ಸಹಿತ ತೆಲಗಿ ನಡೆಸುತ್ತಾ ಇದ್ದಾನೆ ನಮ್ಮ ಸರಕಾರದಲ್ಲಿ ಎಂದು ಹೇಳುತ್ತ ಇದ್ದೀರೇ ಹೊರತು, ಅದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದಕ್ಕೆ ನೀವೇನೂ ಹೇಳಿಲ್ಲ. ರಾಜ್ಯ ಸರಕಾರದ ಬೊಕ್ಕಸಕ್ಕೆ ಆಗಿರತಕ್ಕಂಥ ವಿಚಾರ. ಇವೊತ್ತು ನಾನು ನಿಮಗೆ ಹೇಳುತ್ತೇನೆ. Yes ಸರಿಯೋ ತಪ್ಪೋ Bangalore has become Bangalore. It is a model to the world.

ಹೀಗಾಗಿ, registration, stamp duty ಹಣ ಜಾಸ್ತಿಯಾಗಿದೆ. ಇದು ನಿಮ್ಮ ಸರಕಾರದಿಂದ ಮಾಡಿರತಕ್ಕಂಥ ಸಾಧನೆಯಲ್ಲ. ರಿಜಿಸ್ಟ್ರೇಶನ್‌ಗಳು ಬಹಳ ಆಗಿವೆ, ಬಿಲ್ಡಿಂಗ್‌ಗಳು ಬರುತ್ತಾ ಇವೆ, ಸೈಟ್‌ಗಳು ಎಕ್ಸ್‌ಚೇಂಜ್ ಆಗುತ್ತಾ ಇದೆ, ರೇಟ್ ಜಾಸ್ತಿಯಾಗಿದೆ, ಅದರಿಂದಾಗಿ ಸ್ವಲ್ಪ ಹಣ ಜಾಸ್ತಿಯಾಗಿದೆ. ಒಂದು ಕಡೆ ತೆಲಗಿ ಛಾಪಾ ಕಾಗದವನ್ನು ಜೈಲ್‌ನಲ್ಲಿ ಕುಳಿತುಕೊಂಡು ನಡೆಸುತ್ತ ಇದ್ದಾನೆಂದು ಹೇಳುತ್ತೀರಿ? ಆ ಜೈಲ್‌ನ ಹೊಣೆ ಯಾರದ್ದು? ಮಹಾರಾಷ್ಟ್ರ ಸರಕಾರದವರದ್ದೇ? ಆ ಜೈಲ್‌ನ ಹೊಣೆಯು ನಿಮ್ಮದೇನೇ. ಅದರಿಂದಾಗಿ ಇದು ಯಾರನ್ನೋ ರಕ್ಷಣೆ ಮಾಡುವುದಕ್ಕೆ ಏನನ್ನೋ ರಕ್ಷಣೆ ಮಾಡಿಕೊಳ್ಳಲಿಕ್ಕೆ ವ್ಯವಸ್ಥೆಯಲ್ಲಿರ ತಕ್ಕಂಥ ವೈಫಲ್ಯಗಳನ್ನು ಕೊನೆಪಕ್ಷ ಅದನ್ನಾದರೂ ಹೇಳತಕ್ಕಂಥ ಕೆಲಸವನ್ನು ಮಾಡಲಿಲ್ಲ. ಅದನ್ನು ಬಿಟ್ಟು ಕೇಂದ್ರ ಸರಕಾರವನ್ನು ಟೀಕೆ ಮಾಡತಕ್ಕಂಥಾದ್ದು. ಕೇಳಿದರೆ, ನಾಸಿಕ್ ಪ್ರಿಂಟಿಂಗ್ ಪ್ರೆಸ್‌ನಿಂದ ಕಳ್ಳತನವಾಯಿತಂತೆ, ಯಾರು ನಿಮಗೆ ಹೋಗಿ ಹಿಡಿಯಬೇಡಿ ಎಂದು ಹೇಳಿದ್ದಾರೆ? ಆದುದರಿಂದ ಎಲ್ಲೋ ವ್ಯವಸ್ಥೆಯಲ್ಲಿ ತಪ್ಪಾಗಿದೆ. ಅದಕ್ಕಾಗಿ ನಾವು ಜನತೆಯ ಕ್ಷಮೆ ಕೋರುತ್ತೇವೆ ಎನ್ನುವಂಥ ಗುಣವನ್ನು ತೋರಿಸಿದ್ದಿದ್ದರೆ, ನಾವು ನೀವು ಕೊಟ್ಟಿರ ತಕ್ಕಂಥ ಉತ್ತರ ಸರಿಯಾಗಿದೆ ಎನ್ನುವ ಮಾತನ್ನು ಹೇಳುತ್ತ ಇಲ್ಲ. ವ್ಯವಸ್ಥೆಯಲ್ಲಿನ ವೈಫಲ್ಯತೆಯನ್ನು ಕೂಡ ನೀವು ಒಪ್ಪುವುದಕ್ಕೆ ತಯಾರಾಗಿಲ್ಲ. ಅದರಿಂದಾಗಿ ನಾವು ಈ ಸರಕಾರದ ನೀತಿಯನ್ನು ಖಂಡನೆ ಮಾಡಿ, ನಾವು ಸಭಾತ್ಯಾಗ ಮಾಡುತ್ತಾ ಇದ್ದೇವೆ.

[ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು]

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೆ, ಮಾಜಿ ಗೃಹಸಚಿವರಿಂದ ಈ ಭಾಷೆಯನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. He was ex-Home Minister. Do you say this with full heart? I don't think so. Then, you have not performed your duty as a Home Minister.

ಶ್ರೀ ಬಿ. ಸೋಮಶೇಖರ್:– ಮಾನ್ಯ ಅಧ್ಯಕ್ಷರೆ, ನಾವು ಕೆಲವು ವಿಚಾರಗಳನ್ನು ಎತ್ತಿದ್ದೆವು. ನಮ್ಮ ಪಕ್ಷದ ವತಿಯಿಂದ ಬಹಳ ಪ್ರಮುಖವಾದಂಥ ವಿಚಾರಗಳನ್ನು ಎತ್ತಿದ್ದೆವು. ಈಗ ಇವರು ಎಲ್ಲೋ ತಿಪ್ಪೆ ಸಾರಿಸತಕ್ಕಂಥ ಅಸ್ಪಷ್ಟವಾದಂಥ ಉತ್ತರವನ್ನು ಕೊಟ್ಟರು. ಅವುಗಳು ಅಸಂಬದ್ಧವಾದಂಥ ಉತ್ತರ.

ಶ್ರೀ ಡಿ.ಬಿ. ಚಂದ್ರೇಗೌಡ:– ಸಿಂಧ್ಯರವರು ಪ್ರಶ್ನೆಗಳನ್ನು ಕೇಳಿ ಹೊರಗೆ ನಡೆದರು. ನೀವು ಪ್ರಶ್ನೆ ಕೇಳಿದಾಗ ಇವರು ಒಳಕ್ಕೆ ಬಂದರು. ಸರಕಾರದವರು ನಾವು ಏನು ಮಾಡಬೇಕು? How do we conduct the House?

SRI B. SOMASHEKHAR:- We don't go out. No. We will elicit reply from you. We want you to give proper reply.

SRI D.B. CHANDREGOWDA:- What should we do with these people?

SRI B. SOMASHEKHAR:- They are doing their business.

SRI D.B. CHANDREGOWDA:- Is it the way of running the House?

SRI B. SOMASHEKHAR:- We are not iterested in stalling the proceedings of the House. We want healthy discussion. We want healthy reply from the Government.

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ಹೇಳಿದ್ದನ್ನು ಕೇಳುವ ತಾಳ್ಮೆ ತಮಗೂ ಇರಬೇಕು. ಮಾಜಿ ಗೃಹಸಚಿವರಿಗೇ ತಾಳ್ಮೆ ಇಲ್ಲವೆಂದರೆ ನಾವೇನು ಹೇಳುವುದು? How do we reply?

ಶ್ರೀ ಬಿ. ಸೋಮಶೇಖರ್:- ಈಗ ಸರಕಾರ ಒಪ್ಪಿಕೊಂಡಿದೆ. ಜೈಲ್‌ನಲ್ಲಿ ಇದ್ದುಕೊಂಡೇನೇ. ನಕಲಿ ಛಾಪಾ ಕಾಗದದ ವ್ಯವಹಾರ ನಡೆಯುತ್ತಿದೆ ಎಂದು ಒಪ್ಪಿಕೊಂಡ ಮೇಲೆ, What prevented you from taking a decision which you have taken in 2003? What prevented you from doing that? ನಾವು ಹೇಳುವುದೇನೆಂದರೆ, ಈ ನಕಲಿ ಛಾಪಾ ಕಾಗದದ ಮಾರಾಟಕ್ಕೆ ನೀವು ಉತ್ತೇಜನ ಕೊಟ್ಟಿದ್ದೀರಿ, ಅದನ್ನು ನಿಲ್ಲಿಸತಕ್ಕಂಥ ಅವಕಾಶವಿದ್ದರೂ ನೀವೇನೂ 2003ನಲ್ಲಿ ನಿಲ್ಲಿಸದ್ದೀರಿ ಎಂದು ಹೇಳಿಕೊಂಡಿದ್ದೀರಲ್ಲಾ? ಯಾವ ಪ್ರೊವಿಜನ್‌ನಲ್ಲಿ? 1999ರಲ್ಲಿದ್ದಂಥ ಪ್ರೊವಿಜನ್‌ನಲ್ಲಿಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಯಾರು ಇಲ್ಲವೆಂದು ಹೇಳಿದ್ದು?

SRI B. SOMASHEKHAR:- You accept it.

SRI D.B. CHANDREGOWDA:- Why do you argue a bad case? Law is law whether it is done by Chandregowda or done by Somashekhar. Law is Law.

SRI B. SOMASHEKHAR:- Why not? Law is done by Janatha Dal Government.

ಶ್ರೀ ಡಿ.ಬಿ. ಚಂದ್ರೇಗೌಡ:- ಸರಿ, ನಿಮ್ಮ ಸರಕಾರವೇ ಮಾಡಿದೆ. ನೀವೇ ಕ್ರೆಡಿಟ್ ತೆಗೆದುಕೊಳ್ಳಿ. I don't come in the way. I have said it. I used the same law and we have dispensed with this stamp papers. Are you happy?

SRI B. SOMASHEKHAR:- You can't dispense with it. ಈ ಮೂರು ವರ್ಷಗಳ ಕಾಲ ರೂರಲ್ ಏರಿಯಾದಲ್ಲಿ ಎಲ್ಲೆಲ್ಲಿ ಸ್ಟಾಂಪ್ ಪೇಪರ್ ಹೋಗಿದೆ ಅದಕ್ಕೆ ರಿಪ್ಲೈ ಕೊಟ್ಟಿಲ್ಲ. ಎಲ್ಲಾ ಸಬ್‌ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಎಷ್ಟು ಹಣ ನಷ್ಟವಾಗಿದೆ ಅದಕ್ಕೆ ಉತ್ತರ ಕೊಟ್ಟಿಲ್ಲ.

SRI D.B. CHANDREGOWDA:- It is a day to day matter, routine matter and every day it happens, every day we draw papers from Nasik press, every month we draw draw, every year we draw.

ಶ್ರೀ ಬಿ. ಸೋಮಶೇಖರ್:- ನಮಗೆ ಅದರ ವಿವರಗಳು ಬೇಕು. ನಾವು ಇವೊತ್ತು ಹೇಳುತ್ತೇವೆ, ರೋಶನ್‌ಬೇಗ್ ಸ್ಟ್ಯಾಂಪ್ ಬಗ್ಗೆ ತಾವು ಹೇಳಲೇ ಬೇಕು. ಇಲ್ಲವಾದಲ್ಲಿ ಅವರು ತಪ್ಪು ಮಾಡಿಲ್ಲ ಎಂದು ಹೇಳಿ.

SRI D.B. CHANDREGOWDA:- From one subject to the other subject. How can we reply?

SRI B. SOMASHEKHAR:- You disclose he has not committed Why did you ask him to resign? Is it not acquitting the thief?

ಶ್ರೀ ಡಿ.ಬಿ. ಚಂದ್ರೇಗೌಡ:– ಅದಕ್ಕಾಗಿಯೇ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ, ಸಂಸತ್‌ನಲ್ಲಿ ಬಹಳ ಚರ್ಚೆಯಾಯಿತು, ಸಂಸತ್‌ನಲ್ಲಿ ಫೈನಾನ್ಸ್ ಮಿನಿಸ್ಟರ್‌ರವರು the magnitude of the problem is spread over the whole nation, 16 States have been involved and it has double jeopardy. The same case annot be tried in different Courts at different point of time ಅನ್ನುವಂಥಾದ್ದನ್ನು ಹೇಳಿ, ಎಲ್ಲಾ ರಾಜ್ಯಗಳಿಗೆ ಕೇಳಿಕೊಂಡರು, ಎಲ್ಲರೂ ಒಂದೇ ಏಜನ್ಸಿನಲ್ಲಿ ಇನ್‌ವೆಸ್ಟಿಗೇಶನ್ ಮಾಡೋಣ ಎಂದು ಹೇಳಿದರು. We responded to that ಅನ್ನತಕ್ಕಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆದರೂ ಕೂಡ ಕೇಂದ್ರದ ಒಬ್ಬ ಫೈನಾನ್ಸ್ ಮಿನಿಸ್ಟರ್ ಹೇಳಿದ್ದನ್ನು ನಾವು ಇಲ್ಲಿ ಹೇಳಿದರೆ ಅದೂ ಕೂಡ ಇವರಿಗೆ ಅರ್ಥವಾಗದಿದ್ದರೆ ನಾವೇನು ಮಾಡೋಣ?

ಶ್ರೀ ಬಿ. ಸೋಮಶೇಖರ್:– ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದರೂ ಬೇಯವರ ತಟ್ಟೆಯಲ್ಲಿ ನೊಣ ಇದೆ ಎಂದ ಹಾಗೆ ನಿಮ್ಮ ಮಾತುಗಳು ಇವೆ. ಬೇರೆ ರಾಜ್ಯಗಳಲ್ಲೆಲ್ಲಾ ಇದೆ, ಆದರೆ ನಿಮ್ಮ ರಾಜ್ಯದಲ್ಲಿ ಹುಟ್ಟಿರತಕ್ಕಂಥಾದ್ದಕ್ಕೆ ಏನು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು:– ಸರಕಾರದವರು ತಮ್ಮ ಉತ್ತರವನ್ನು ಸಮಂಜಸವಾಗಿ ಕೊಟ್ಟಿದ್ದಾರೆ. ಇವೊತ್ತಿನ ಕಾರ್ಯಕಲಾಪಗಳ ಕಾಲ ಮುಗಿಯಿತು. ಈಗ ಸಮಯ ಆರು ಘಂಟೆಯಾಗಿದೆ. ಸಭೆಯು ಇಂದಿನ ಕಾರ್ಯಕಲಾಪಗಳನ್ನು ಮುಗಿಸಿ ಮತ್ತೆ ನಾಳೆ ಬೆಳಿಗ್ಗೆ 10–30 ಗಂಟೆಗೆ ಸೇರುತ್ತದೆ.

[ಸದನವು 6–00 ಘಂಟೆಗೆ ಮುಂದೂಡಲ್ಪಟ್ಟು ದಿನಾಂಕ 09–01–04 ರಂದು ಬೆಳಿಗ್ಗೆ 10–30 ಗಂಟೆಗೆ ಸೇರಲು ನಿರ್ಧರಿಸಿತು]

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)